ದಿಃ 24.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಯು.ಎಂ.ಎ., ವಕೀಲರಿಂದ ಪ್ರತಿವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 12.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ಪ್ರತಿವಾದಿ ಪರವಾಗಿ**

3. ದಿಃ 03.10.2020 ರಂದು ನಾನು ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತೇನೆ. ಕ್ರಯ ಪತ್ರದಲ್ಲಿ ಮನೆ ಮತ್ತು ಹಟ್ಟಿಯನ್ನು ನಮೂದು ಮಾಡಿರುತ್ತೇನೆ. ಮನೆ ಮತ್ತು ಹಟ್ಟಿಯನ್ನು ಮಾರಾಟ ಮಾಡಿದ ಬಗ್ಗೆ ಖರೀದಿದಾರರು ನೊಂದಾವಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕವನ್ನು ಪಾವತಿ ಮಾಡಿರುತ್ತಾರೆ. ಕ್ರಯ ಪತ್ರ ಮಾಡಿಕೊಡುವ ಸಮಯದಲ್ಲಿ ನಾನು ಪ್ರತಿವಾದಿಯಿಂದ ಹಣ ಪಡೆದುಕೊಂಡಿರುವುದಿಲ್ಲ. ಸದರಿ ಕ್ರಯ ಪತ್ರದ ಸಲುವಾಗಿ ನನ್ನ ಪರವಾಗಿ ಬೇರೆ ಯಾರು ಹಣ ಪಡೆದುಕೊಂಡಿರುವುದಿಲ್ಲ. ನಾನು ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸುರೇಶ್ ರವರು ಪ್ರಥಮ್ ರವರ ವಿರುದ್ದ ದಾಖಲು ಮಾಡಿರುತ್ತಾರೆ. ಪ್ರತಿವಾದಿಯು ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ವಾದಿಯು ಈ ದಾವೆಯನ್ನು ದಾಖಲು ಮಾಡಿಕೊಂಡಿರುತ್ತಾರೆ. ಪ್ರತಿವಾದಿಯು ಎಷ್ಟು ಒತ್ತುವರಿ ಮಾಡಿರುತ್ತಾರೆ ಎಂದು ದಾವೆಯಲ್ಲಿ ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಯ ಸರ್ವೆ ನಂಬರ್ 110/10 ಆಗಿರುತ್ತದೆ. ಸರ್ವೆ ನಂಬರ್ 110 ರಲ್ಲಿ ಒಟ್ಟು ಎಷ್ಟು ಪೋಡುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 110 ರ ಯಾವ ಯಾವ ಪೋಡುಗಳಲ್ಲಿ ಎಷ್ಟು ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 110/5 ರಲ್ಲಿ ಬೈರೇಗೌಡರು ಸ್ವಾಧೀನ ಇರುತ್ತಾರೆ. ಸರ್ವೆ ನಂಬರ್ 110/7 ರಲ್ಲಿ ವಾದಿಯು ಸ್ವಾಧೀನ ಇರುತ್ತಾರೆ. ಸರ್ವೆ ನಂಬರ್ 110 ರ ಇತರ ಪೋಡುಗಳಲ್ಲಿ ಯಾರು ಸ್ವಾಧೀನ ಇರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ವಾದಿಗೆ ಸೇರಿದ

ಸರ್ವೆ ನಂಬರ್ 110 ಜಮೀನು ಸುಮಾರು 5 ಎಕಟೆ ವಿಸ್ತೀರ್ಣ ಇರುತ್ತದೆ. ಬೈರೇಗೌಡರಿಗೆ ಸರ್ವೆ ನಂಬರ್ 110 ರಲ್ಲಿ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಸರ್ವೆ ನಂಬರ್ 110 ರಲ್ಲಿ ಯಾವ ಪೋಡಿಯಲ್ಲಿ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಬೈರೇಗೌಡರಿಗೆ ಸರ್ವೆ ನಂಬರ್ 110 ರ ಎಷ್ಟು ಪೋಡುಗಳಲ್ಲಿ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ನ್ಯಾಯಾಲಯದಲ್ಲಿ ದಾಖಲಾಗಿರುವ O.S.No.44/2022 ರಲ್ಲಿ ನಾನು ಸಾಕ್ಷಿದಾರನಾಗಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 110/5 ರಲ್ಲಿ ಬೈರೇಗೌಡರ ಜಮೀನು ಇರುತ್ತದೆ. ಬೈರೇಗೌಡರ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಿಃ 03.10.2020 ರಂದು ಪ್ರತಿವಾದಿಗೆ ಕ್ರಯ ಪತ್ರ ಮಾಡುವ ಪೂರ್ವದಲ್ಲಿ ನಾನು ಸದರಿ ಆಸ್ತಿಯ ಸ್ವಾಧೀನ ಹೊಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳೇ ಸ್ವಾಧೀನ ಹೊಂದಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಸದರಿ ಜಮೀನನ್ನು ಸ್ವಾಧೀನ ಹೊಂದಿದ್ದರು. ನಾನಾಗಲಿ ನನ್ನ ಸಹೋದರನಾಗಲಿ ಪ್ರತಿವಾದಿಗೆ ಕ್ರಯ ಪತ್ರ ಮಾಡಿರುವ ಜಮೀನನ್ನು ಸ್ವಾಧೀನ ಹೊಂದಿರಲಿಲ್ಲ ಎಂದು ನುಡಿಯುತ್ತಾರೆ.

4. ದಿಃ 03.10.2020 ರಂದು ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುವ ಆಸ್ತಿಯನ್ನು ಯಾವತ್ತು ಪ್ರತಿವಾದಿಗೆ ಸ್ವಾಧೀನ ಬಿಟ್ಟುಕೊಟ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ 18 ಗುಂಟೆಗಿಂತ ಹೆಚ್ಚು ಆಸ್ತಿ ನಮ್ಮ ಸ್ವಾಧೀನ ಇರಲಿಲ್ಲ. ದಾವ ಆಸ್ತಿಯನ್ನು ಸರ್ವೆ ಮಾಡುವಾಗ ನಾನು ಹಾಜರಿರಲಿಲ್ಲ. ನನ್ನ ಖಾತೆಯಲ್ಲಿ ಸರ್ವೆ ನಂಬರ್ 110/10 ರ ಜಮೀನು ಸ್ವಾಧೀನ ಇರುವಾಗ ಪೋಡಿಯಾಗಿತ್ತು. ಸದರಿ ಜಮೀನು ಎಷ್ಟು ವರ್ಷಗಳ ಹಿಂದೆ ಪೋಡಿಯಾಗಿರುತ್ತದೆ ಎಂದು

ನನಗೆ ಗೊತ್ತಿಲ್ಲ. ಸದರಿ ಪೋಡಿ ಪ್ರಕ್ರಿಯೆಯಲ್ಲಿ ನನ್ನ ತಂದೆಯು ಭಾಗಿಯಾಗಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವ ಆಸ್ತಿಯ ಹದ್ದುಬಸ್ತು ಸರ್ವೆ ಆಗುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ದಾವ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರು ಸಹ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಯ ಗಡಿಗುರುತನ್ನು ನಮೂದು ಮಾಡಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ವಾದಿಗೆ ಸೇರಿದ ಸರ್ವೆ ನಂಬರ್ 110/5 ಆಸ್ತಿಯ ಒಟ್ಟು 8 ಗುಂಟೆ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ಕ್ರಯ ಪತ್ರ ಬರೆದುಕೊಟ್ಟಿರುವುದರಿಂದ ಮತ್ತು ಪ್ರತಿವಾದಿಯು ನನ್ನ ಸಹೋದರ ಸಂಬಂಧಿಯಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ